ಸಾವಿರಾರು ಮೈಲುದೂರಕ್ಕು ಓಡಿಬಂದಿದ್ದಾಳೆಂದರೆ, ಈ ಲವ್ಗತೆಯಿನ್ನೆಷ್ಟು ಇಂಟೆನ್ಸೆಂದು ಊಹಿಸಿಕೊಳ್ಳಿ!

ಇನ್ನು ನಾನೆಂತಹ ಹಮ್ಮೀರನೆಂದೂ ಒಂದಷ್ಟು ಕೊಚ್ಚಿಕೊಳ್ಳಲೇಬೇಕು. ಈ ಪಟಕತೆಯೊಳಗೊಂದಿಷ್ಟು ಹೀರೋಗಿರಿ ಮೆರೆಯಲೇಬೇಕು. ಇಲ್ಲೇ ಬೆಂಗಳೂರಿನಲ್ಲೊಂದು ಖಾಸಗೀ ಯೂನಿವರ್ಸಿಟಿಯಲ್ಲಿ 'ಪಾಲಿಟಿಕ್ಸ್' ಕಲಿತ ನಾನು, ಪಿಎಚ್.ಡಿ. ಸಲುವಾಗಿ ನಾಲ್ಕು ವರ್ಷಗಳ ಹಿಂದೆ, ಬಲು ಅಜೀಬಿನ ವಸ್ತುವರಸಿಕೊಂಡು ಕಳೆದೇಹೋಗಿದ್ದೆ! ಏನಾದರೂ ಡಿಫರೆಂಟಾಗಿ ಮಾಡುವುದೆನ್ನುವ ಉಮೇದಿನ ಮೇರೆಗೆ!! ಹಳೆಯ ಸಹಸ್ರಮಾನದ ಕೊನೆಯ ದಶಕದಲ್ಲಿ ಹುಟ್ಟಿ ಹೊಸತದರಲ್ಲಿ ಗಡ್ಡಮೀಸೆಗಳ ಗಡಸು ಗಂಡಸ್ತಿಕೆಯನ್ನು ಸಾಧಿಸಿದ ನನಗೆ, ಯಾರೂ ಮಾಡದ್ದನ್ನು ಮಾಡಬೇಕೆನ್ನುವ ಹುರುಪು ಚಿಕ್ಕಂದಿನಿಂದಲೂ ಇದ್ದಿತು. ಮತ್ತು ಈಗಲೂ ಇದ್ದೇ ಇದೆ. ಹಾಗಾಗಿಯೇ, ಸಂಶೋಧನೆಗೆಂದು 'ಇಪ್ಪತ್ತೊಂದನೆಯ ಶತಮಾನದ ಜಗತ್ತಿನಲ್ಲಿನ ಆತಂಕದ ಪರಿ ಮತ್ತು ರಾಜಕೀಯ ಜಿಜ್ಞಾಸೆ' ಅಂತೆಂಬ ಟಾಪಿಕು ಕೈಕೊಂಡು ಥೀಸಿಸಿನಲ್ಲಿ ತೊಡಗಿಬಿಟ್ಟೆ. ಇವೊತ್ತು ಮನುಷ್ಯಕುಲವನ್ನು ಕಾಡುತ್ತಿರುವ ಜಾಗತಿಕ ಸಂಕಟಗಳಲ್ಲಿ, ಆತಂಕವಾದ ಮತ್ತು ಭಯೋತ್ಪಾದನೆಗೂ ಹೆಚ್ಚಾದ ದಿಗಿಲಿನ ವಿಷಯವೆಂದರೆ ನಾವು ಇಪ್ಪತ್ತನೆಯ ಶತಮಾನದಿಂದೀಚೆಗೆ ಸೆಕ್ಯುಲರಿಕೆ ಮತ್ತು ಡೆಮಾಕ್ರೆಸಿಯ ಹೆಸರಿನಲ್ಲಿ ಮನುಷ್ಯಕೇಂದ್ರಿತ ಅಭಿವೃದ್ಧಿಯೆಂಬುದನ್ನು ಬೆನ್ನಟ್ಟಿ ಮಾಡುತ್ತಿರುವ ರಾಜಕೀಯ. ಕಳೆದ ನೂರು ವರ್ಷಗಳಿಂದೀಚೆಗೆ ನೆಲನೀರುಗಳಿರಲಿ, ಆಕಾಶದಂತಹ ಆಕಾಶವನ್ನೂ ವಿಭಜಿಸಿ, ಗಡಿಗಳನ್ನು ಕೊರೆದು ಮುನ್ನಡೆಯೆಂದರೆ ಇಡೀ ಭೂಗ್ರಹದಲ್ಲೆಲ್ಲೆಡೆ ಹಕ್ಕು ಸಾಧಿಸುವುದೆಂತಲೇ ಕಲ್ಪಿಸಿ ರೂಢಿಸಿಕೊಂಡಿದ್ದೇವಲ್ಲ, ಈ ಕುರಿತೇನನ್ನುವುದು? ಇಂತಹ ಸನ್ನಿವೇಶದಲ್ಲಿ, ಜಗತ್ತಿನಲ್ಲಿ ಅಲ್ಲಲ್ಲಿ ಚಾಲ್ತಿಯಲ್ಲಿರುವ ಧರ್ಮಾಧರಿತ ರಾಜಕೀಯದ್ದು ಆತಂಕವೆನ್ನುವುದೋ, ಉಳಿದೆಡೆಗಳಲ್ಲಿ ನಡೆಯುತ್ತಿರುವ ಸೋಗೇ ಸೋಗಿನ ಮನುಷ್ಯಸೌಖ್ಯೋದ್ದೇಶಿತ ರಾಜ್ಯಭಾರವು ಗಾಬರಿಯದೆನ್ನುವುದೋ... ಇದು ನನ್ನ ದಿಟದ ತನಿಖೆ. ಇದನ್ನು ವಿಶದಿಸಿಕೊಳ್ಳುವ ಸಲುವಾಗಿಯೇ ಆಫ್ಘಾನಿಸ್ತಾನದ ವಿದ್ಯಮಾನವನ್ನು, ಅದರಲ್ಲೂ ತಾಲಿಬಾನೀ ಜಿದ್ದುಗಾರಿಕೆಯನ್ನು ಶೋಧಿಸಲಿಕ್ಕೆಂದು ಪಾಕಿಸ್ತಾನಕ್ಕೆ ಅತಿ ಮಗ್ಗುಲಿಗಿರುವ ಪಶ್ಚಿಮದ ದೇಶಗಳನ್ನು ಹೊಕ್ಕೆ. ಅಲ್ಲೆಲ್ಲ ಅಲೆದಲೆದು, ಅಲ್ಲಿಲ್ಲಿ ನೆಲೆಯುಳಿದು, ಜಗತ್ತಿಗೆ ಗೊತ್ತಿರದ ಸತ್ಯವನ್ನು ನನ್ನ ಮಟ್ಟಿಗೆ ಕಂಡುಕೊಂಡೆ. ಈ ಓಡಾಟದ ಸಂದರ್ಭದಲ್ಲಿಯೇ ಅಚಾನಕ್ಕಾಗಿ, ತನ್ವಿ ಇಂತಿಯಾಜ಼್ ಅಖ್ತರ್ ಎಂಬೀ ಲಲನೆಯು ನನ್ನ ಮೈಮನಸ್ಸಿಗೊಗ್ಗಿ ಬಂದು ಇದೀಗ ನನ್ನೊಡನೆ ನೆಲೆಯೂರುವವರೆಗೂ ಒದಗಿ ಬಂದಿದ್ದಾಳೆ.

ಥೀಸಿಸು ಮುಗಿಸಿ, ಮರಳಿ ಭಾರತವೆಂದು ನಿರ್ಣಯಿಸುವಾಗ, ಸ್ವಾಭಾವಿಕವಾಗಿ, ತನ್ವಿ ನನ್ನೊಡನೆ ಬರುವೆನೆಂದು ನಿರ್ಧರಿಸಿದಳು. ಅದಕ್ಕು ಮೊದಲು ಇಬ್ಬರ ನಡುವೆ, ಆದಷ್ಟು ದಿವಸ ಜೊತೆಯಲ್ಲಿರುವುದೆಂಬ ಆಡಿ ಮಾಡಿಕೊಂಡಿದ್ದಿರದ ಒಡಂಬಡಿಕೆಯೇನೋ ಇದ್ದಿತು. ಹೊಳೆಯೆದುರಾದಾಗ ಸೇತುವೆ ಕಟ್ಟುವುದಂತ ನಿಶ್ಚಯವನ್ನು ಬೇಕೆಂತಲೇ ಮುಂದೂಡಿದ್ದೆವು. ಬೆಂಗಳೂರಿನಲ್ಲಿ ತಾಯ್ತಂದೆಯರೊಡನೆಯೇ ನೆಲೆಸಬೇಕೆಂದು ನನ್ನ ಇರಾದೆಯಿರದಿದ್ದರೂ, ಇಂಡಿಯಾ ತಲುಪಿ ಮುಂದೇನೆಂದು ಡಿಸಿಶನ್ ಆಗುವವರೆಗೂ ಅವರೊಡನಿರುವುದೆನ್ನುವ ಇಂಗಿತವಂತೂ ಇದ್ದಿತು. ಈ ಕುರಿತು ತನ್ವಿಯಲ್ಲಿ ತೋಡಿಕೊಂಡ ಸುಮಾರಿನಲ್ಲಿಯಷ್ಟೇ, ನಾವು ಒಬ್ಬರನ್ನೊಬ್ಬರು ಎಷ್ಟು ಹಚ್ಚಿಕೊಂಡಿದ್ದೇವೆಂದು ಇಬ್ಬರಿಗೂ ಅರ್ಥವಾಗಿದ್ದು. ಅವಳನ್ನು